ಓ.ಎಸ್.ನಂ.394-2014
ಪಿ.ಡಬ್ಲು-2

ದಿ: 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಎ.ಜಿ.ಎನ್.ವಕೀಲರಿಂದ.

3. 2015 ನೇ ಸಾಲಿನಲ್ಲಿ ಪೊಡಿ ರದ್ದಾದ ನಂತರ ಎಲ್ಲಾ ಸರ್ವೆ ನಂಬರ್ ಗಳನ್ನು ಒಟ್ಟುಗೂಡಿಸಲಾಗಿರುತ್ತದೆ ಎಂದರೆ ಸರಿ. ಆ ರೀತಿ ಮೂಲ ಸರ್ವೆ ನಂಬರ್ 3/2 ರಲ್ಲಿ ಒಟ್ಟುಗೂಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಒಟ್ಟು ಗೂಡಿಸಿದ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ಪ್ರಸ್ತುತ ದಾವೆಯ ಪಕ್ಷಗಾರರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಒಟ್ಟುಗೂಡಿಸಿದ ಪಹಣಿ ಪತ್ರಿಕೆಯಲ್ಲಿ ನಂಜಪ್ಪರವರಿಗೆ 25 ಗುಂಟೆ ಜಮೀನ್ನನ್ನು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ನಾನು ಆ ರೀತಿ ಒಟ್ಟು ಗೂಡಿಸುವ ಕುರಿತು ಆದೇಶವಾದ ನಂತರ ಪೊಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ. ಆ ರೀತಿ ಪಹಣಿ ಪತ್ರಿಕೆಯನ್ನು ಒಟ್ಟು ಗೂಡಿಸುವ ಕುರಿತು ಆದೇಶವಾದ ನಂತರ ವಾದಿಯು ಪೊಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಸರ್ವೆ ನಂಬರಗಳನ್ನು ಒಟ್ಟುಗೂಡಿಸಿದ ನಂತರ ಸರ್ವೆ ನಕ್ಷೆಗಳನ್ನು ಒಟ್ಟು ಗೂಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ರೀತಿ ಪಹಣಿ ಪತ್ರಿಕೆಗಳನ್ನು ಮತ್ತು ಸರ್ವೆ ದಾಖಲೆಗಳನ್ನು ಒಟ್ಟು ಗೂಡಿಸಿದ ಮೇರೆಗೆ ಯಾರ ಆಸ್ತಿಗಳು ಎಲ್ಲಿವೆ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಆ ರೀತಿ ಒಟ್ಟು ಗೂಡಿಸುವ ಆದೇಶವಾದ ಮೇರೆಗೆ ವಾದಿಯ ಬಳಿ ಪೊಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸುವ ಕುರಿತು ವಿಚಾರಿಸಿರುವುದಿಲ್ಲ. ವಾದಿಯು ದಾವೆಯನ್ನು ಸರ್ವೆ ನಂಬರ್ 3/2 ಜಮೀನಿನ ಮೇಲೆ ಮಾಡಿರುತ್ತಾರೆ. ವಾದಿಯು ಯಾವ ಸರ್ವೆ ನಂಬರ್ ಮೇಲೆ ದಾವೆ ಮಾಡಿರುತ್ತಾರೆಂದು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿಯು ನಾಲ್ಕುವರೆ ಗುಂಟೆ ಜಮೀನು ಕುರಿತು ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂ.3/2 ಜಮೀನಿನ ಪೂರ್ವ ದಿಕ್ಕಿಗೆ ವಾದಿಯು ದಾನ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಚಿಕ್ಕಮುನಿಶ್ಯಾಮಿ , ಮುನಿಯಪ್ಪ ಮತ್ತು ನಂಜಪ್ಪ ರವರುಗಳು ಪೂರ್ವಪಶ್ಚಿಮಾಭೀಮುಖವಾಗಿ ವಿಭಾಗ ಮಾಡಿಕೊಂಡಿರುತ್ತಾರೆ. ಸರ್ವೆ ನಂ.3/2 ಜಮೀನಿನ ಉತ್ತರ ದಿಕ್ಕಿಗೆ ನಂಜಪ್ಪರವರ ಹೆಸರಿಗೆ ಭಾಗ ನೀಡಿದ್ದು ಮತ್ತು ಆ ಕುರಿತು 25 ಗುಂಟೆ ಜಮೀನು ಅವರ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಂಜಪ್ಪರವರಿಗೆ ನೀಡಿದ ಜಾಗದ ದಕ್ಷಿಣ ದಿಕ್ಕಿಗೆ ಮುನಿಯಪ್ಪರವರಿಗೆ ಜಮೀನು ಭಾಗವಾಗಿ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪರವರಿಗೆ ನೀಡಿದ ಜಾಗದ ದಕ್ಷಿಣ ದಿಕ್ಕಿಗೆ ಚಿಕ್ಕ ಮುನಿಶ್ಯಾಮಿರವರಿಗೆ ಜಮೀನು ಭಾಗವಾಗಿ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ನಂಜಪ್ಪ, ಮುನಿಯಪ್ಪ ಮತ್ತು ಮುನಿಶ್ಯಾಮಿರವರು ಭಾಗ ಮಾಡಿಕೊಂಡಿರುವ ಜಮೀನಿನ ಪಶ್ಚಿಮ ದಿಕ್ಕಿಗೆ 27 ಗುಂಟೆ ಜಮೀನ್ನನ್ನು ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ.

ಆ ರೀತಿ ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಜಮೀನ್ನನ್ನು ಸೇರಿಸಿಕೊಂಡು ಸದರಿ ನಂಜಪ್ಪ ಮತ್ತು ಇತರರು ತಮ್ಮ ಹೆಸರಿಗೆ ಪಹಣಿ ಪತ್ರಿಕೆ ಮಾಡಿಸಿಕೊಂಡಿದ್ದರು ಎಂದರೆ ಸರಿ. ಆ ರೀತಿ ಚಿಕ್ಕ ಮುನಿಶ್ಯಾಮಿಗೆ 25 ಗುಂಟೆ ಜಮೀನು, ನಂಜಪ್ಪನ ಭಾಗಕ್ಕೆ 29 ಗುಂಟೆ ಮತ್ತು ಮುನಿಯಪ್ಪ ರವರ ಭಾಗಕ್ಕೆ 29 ಗುಂಟೆ ಜಮೀನಿನ ಪಹಣಿ ಪತ್ರಿಕೆಗಳನ್ನು ಮಾಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ನಂಜಪ್ಪ ಮತ್ತು ಇತರರು ಪಹಣಿ ಪತ್ರಿಕೆಯಲ್ಲಿ ಕಾಣಿಸಿದ ವಿಸ್ತೀರ್ಣದ ಸ್ವಾಧೀನದಲ್ಲಿ ಇರದೇ ಇದ್ದರೂ ಹೆಚ್ಚಿನ ವಿಸ್ತೀರ್ಣವನ್ನು ತಮ್ಮ ಹೆಸರಿಗೆ ನಮೂದು ಮಾಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವಲ್ಪ ಸಮಯದ ನಂತರ ನಾನು 25 ಗುಂಟೆ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಪಹಣಿ ಪತ್ರಿಕೆಯಲ್ಲಿ ತಪ್ಪಾಗಿ ನಮೂದಿಸಿರುವುದನ್ನು ಸರಿಪಡಿಸುವ ಕುರಿತು ನೀವಾಗಲಿ ಅಥವಾ ವಾದಿಯಾಗಲಿ ದಾವೆ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಜ್ಜ ನೀಡಿದ 25 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ ಎಂದು

ನುಡಿಯುತ್ತಾರೆ. ಸದರಿ ಮುನಿಯಪ್ಪರವರು ಬೈಯಮ್ಮ ರವರ ತಂದೆ ಎಂದರೆ ಸರಿ. ನಂಜಮ್ಮ, ಪಾರ್ವತಮ್ಮ ಮತ್ತು ಗೌರಮ್ಮ ರವರುಗಳು ಸದರಿ ಬೈಯಮ್ಮ ರವರ ಮಕ್ಕಳು ಎಂದರೆ ಸರಿ. ವಾದಿ ಸದರಿ ಬೈಯಮ್ಮರವರ ಮೊಮ್ಮಗಳು ಎಂದರೆ ಸರಿ. 1977 ರಲ್ಲಿ ಮಾಡಲಾದ ಜಮೀನಿನ ಹೆಚ್ಚುವರಿ ವಿಸ್ತೀರ್ಣದ ಕುರಿತು ವಾದಿ ಮತ್ತು ಇತರರು ದಾವೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪರವರು ಸ್ವಾಧೀನದಲ್ಲಿದ್ದಾರೆ ಎಂದು ಹೇಳುವ 29 ಗುಂಟೆ ಜಮೀನಿನ ಸ್ವಾಧೀನದಲ್ಲಿರುವುದಿಲ್ಲ ಮತ್ತು ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ವಿಸ್ತೀರ್ಣವನ್ನು ಹೊರತುಪಡಿಸಿದರೆ ಕೇವಲ ಹದಿನೆಂಟುವರೆ ಗುಂಟೆ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಬೈಯಮ್ಮ ರವರು ತಮ್ಮ ತಂದೆಯು 25 ಗುಂಟೆ ವಿಸ್ತೀರ್ಣದ ಸ್ವಾಧೀನದಲ್ಲಿ ಇರದೇ ಇದ್ದರೂ ತನ್ನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಹೆಚ್ಚಿನ ವಿಸ್ತೀರ್ಣಕ್ಕೆ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮುನಿಯಪ್ಪರವರು ಕೇವಲ ಹದಿನೆಂಟುವರೆ ಗುಂಟೆ ಜಮೀನಿನ ವಿಸ್ತೀರ್ಣದಲ್ಲಿದ್ದರು ಹೆಚ್ಚಿನ ವಿಸ್ತೀರ್ಣದ ಕುರಿತು ಬೈಯಮ್ಮ ರವರು ವಾದಿ ಮತ್ತು ಇತರರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಆ ರೀತಿ ವಿಸ್ತೀರ್ಣಗಳು ತಾಳೆಯಾಗದ ಮೇರೆಗೆ ಡಿ.ಡಿ.ಎಲ್.ಆರ್ ರವರಿಗೆ ಮೇಲ್ಮನವಿ ಸಲ್ಲಿಸಿ ಹಿಸ್ಸೆಗಳನ್ನು ವಜಾ ಮಾಡಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟ ವಿಸ್ತೀರ್ಣದ ಕುರಿತು ಕಾಣಿಸಿರುವುದಿಲ್ಲ ಎಂದರೆ ಸರಿ. ಮುನಿಯಪ್ಪ ಮತ್ತು ಅವರ ಮಗಳು ಬೈಯಮ್ಮ ರವರಿಗೆ ಸರ್ವೆ ನಂ.3/2 ಜಮೀನಿನಲ್ಲಿ 1.2 ಎಕರೆ ವಿಸ್ತೀರ್ಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ವಿಸ್ತೀರ್ಣದ ವಿಚಾರವನ್ನು ವಾದಿ ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಸರ್ವೆ ನಂ.3/2(ಸಿ) ಸರ್ವೆ ನಂಬರ್ ಪ್ರಸ್ತುತ ಇರುವುದಿಲ್ಲ. ಪ್ರಸ್ತುತ ಜಮೀನು ಖಾಲಿ ಇದೆ ಎಂದರೆ ಸರಿಯಲ್ಲ. ನಂಜಪ್ಪ ರವರ ಭಾಗಕ್ಕೆ ಹೋಗಿದ್ದ ಜಮೀನಿನ ಉತ್ತರ ದಿಕ್ಕಿನಲ್ಲಿ ನಂಜಪ್ಪ ಮತ್ತು ಅವರ ಮಕ್ಕಳು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 25 ಗುಂಟೆ ಜಮೀನಿನ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು ನಾನು ಮತ್ತು ವಾದಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇರದೇ ಇದ್ದರೂ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.